# ಸೈನಿಕ ಶಾಲೆ ಕೊಡಗು (ಕರ್ನಾಟಕ)

## 2018–19 ಸಾಲಿನ VI ಮತ್ತು IX ನೇ ತರಗತಿಯ ದಾಖಲಾತಿ ಕುರಿತು ಪ್ರಕಟಣೆ

**ಉದ್ದೇಶ.** ವಿದ್ಯಾರ್ಥಿಗಳನ್ನು ರಾಷ್ಟ್ರೀಯ ರಕ್ಷಣಾ ಅಕಾಡೆಮಿ/ಭಾರತೀಯ ನೌಕಾ ಅಕಾಡೆಮಿಗೆ ಸೇರಿಸಲು ಶೈಕ್ಷಣಿಕವಾಗಿ, ಮಾನಸಿಕವಾಗಿ ಮತ್ತು ದೈಹಿಕವಾಗಿ ತರಬೇತಿಗೊಳಿಸುವುದು.

**ದಾಖಲಾತಿಗೆ ಸಂಬಂಧಿಸಿದಂತೆ ವಯೋಮಿತಿ: (ಅ)** VI ನೇ ತರಗತಿ: 02ನೇ ಜುಲೈ 2007 ರಿಂದ 01ನೇ ಜುಲೈ 2008ರೊಳಗೆ (ಎರಡೂ ದಿನಗಳು ಸೇರಿ) ಅಭ್ಯರ್ಥಿಯು ಜನಿಸಿರಬೇಕು. **(ಆ)** IX ನೇ ತರಗತಿ: 02ನೇ ಜುಲೈ 2004 ರಿಂದ 01ನೇ ಜುಲೈ 2005ರೊಳಗೆ (ಎರಡೂ ದಿನಗಳು ಸೇರಿ) ಅಭ್ಯರ್ಥಿಯು ಜನಿಸಿರಬೇಕು. ಅಲ್ಲದೆ ಮಾನ್ಯತೆ ಪಡೆದ ಶಾಲೆಯಲ್ಲಿ VIII ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು. **ಪಠ್ಯಕ್ರಮ**–10+02 ಸಿಬಿಎಸ್‌ಸಿ (ವಿಜ್ಞಾನ ವಿಭಾಗ ಮಾತ್ರ)

**ದಾಖಲಾತಿ.** ಅಖಿಲ ಭಾರತ ಮಟ್ಟದ ಸೈನಿಕ ಶಾಲಾ ಪ್ರವೇಶ ಪರೀಕ್ಷೆ, ಮೌಖಿಕ ಸಂದರ್ಶನ ಮತ್ತು ವೈದ್ಯಕೀಯ ತಪಾಸಣೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವುದು. VIನೇ ಹಾಗೂ IXನೇ ತರಗತಿಯ ಪ್ರಶ್ನೆಪತ್ರಿಕೆಗಳು ಕ್ರಮವಾಗಿ V ನೇ ಹಾಗೂ VIII ನೇ ತರಗತಿಯ ಸಿಬಿಎಸ್‌ಸಿ ಪಠ್ಯಕ್ರಮದ ಆಧಾರದಲ್ಲಿರುತ್ತದೆ.

**ಪ್ರವೇಶ ಪರೀಕ್ಷೆ: 07 ಜನವರಿ 2018 (ಭಾನುವಾರ)**

**ಪರೀಕ್ಷಾ ಕೇಂದ್ರಗಳು:** (ಅ) ಸೈನಿಕ ಶಾಲೆ ಕೊಡಗು: VI ನೇ ಮತ್ತು IX ನೇ ತರಗತಿ (ಬ) ಬೆಂಗಳೂರು: VI ನೇ ತರಗತಿ ಮಾತ್ರ.

**ಖಾಲಿ ಇರುವ ಅಂದಾಜು ಸೀಟುಗಳು.** **VI ನೇ ತರಗತಿಗೆ** : 80-100; **IXನೇ ತರಗತಿಗೆ**:10-20. **ಮೀಸಲಾತಿ.** SC-15%, ST-7.5% ಮತ್ತು ರಕ್ಷಣಾ ಇಲಾಖೆ– 25%

**ಪ್ರಸುತ್ತ ವಾರ್ಷಿಕ ಶುಲ್ಕ.** ಶೈಕ್ಷಣಿಕ ತರಬೇತಿ ಶುಲ್ಕ ಮತ್ತು ಆಹಾರದ ಶುಲ್ಕ ಒಳಗೊಂಡಂತೆ ರೂ. 1, 07,000/- ಆಗಿರುತ್ತದೆ (ಅಂದಾಜು ಮೊತ್ತ). ಪ್ರತಿವರ್ಷ 10% ರಷ್ಟು ಶುಲ್ಕವು ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಅಲ್ಲದೆ ಇತರೆ ಖರ್ಚುಗಳು ಅನ್ವಯಿಸುವ ದರದಲ್ಲಿ ಭರಿಸತಕ್ಕದ್ದು.

**ವಿದ್ಯಾರ್ಥಿ ವೇತನ.** ಉನ್ನತ ಶ್ರೇಣಿ/ಆದಾಯಕ್ಕೆ ಸಂಬಂಧಿಸಿದಂತೆ ಮತ್ತು ಪ.ಜಾತಿ/ಪ.ಪಂಗಡ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿ ವೇತನವು ಕರ್ನಾಟಕದ ವಿದ್ಯಾರ್ಥಿಗಳಿಗೆ ಮಾತ್ರ ಕರ್ನಾಟಕ ಸರಕಾರದಿಂದ ನೀಡಲಾಗುವುದು. ರಕ್ಷಣಾ ಇಲಾಖೆ ವಿದ್ಯಾರ್ಥಿವೇತನವು ಹಾಲಿ ಸೇವೆಸಲ್ಲಿಸುತ್ತಿರುವ/ ನಿವೃತ್ತಿ ಹೊಂದಿರುವ ಯೋಧರ ಮಕ್ಕಳಿಗೆ ನೀಡಲಾಗುವುದು.

| ಕರ್ನಾಟಕ ಸರಕಾರದಿಂದ, ಕರ್ನಾಟಕದ ಖಾಯಂ ವಾಸಿಗಳಿಗಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ | | |
|---|---|---|
| **ವೇತನ ವರ್ಗೀಕರಣ** | **ಮಾಸಿಕ ಆದಾಯ ಶ್ರೇಣಿ (ರೂ)** | **ವೇತನದ ಮೊತ್ತ (ರೂ)** |
| ಮೆರಿಟ್ | -- | 49,687-00 |
| ಪೂರ್ತಿ | 0-13000 | 49,687-00 |
| ಮುಕ್ಕಾಲು ಭಾಗ | 13001-15000 | 37,264-00 |
| ಅರ್ಧ ಭಾಗ | 15001-17000 | 24,844-00 |
| ಕಾಲು ಭಾಗ | 17001-19000 | 12,422-00 |

| ರಕ್ಷಣಾ ಇಲಾಖೆ ವಿದ್ಯಾರ್ಥಿ ವೇತನ ಸೇವೆಸಲ್ಲಿಸುತ್ತಿರುವ / ಸೇವೆಯಿಂದ ನಿವೃತ್ತಿ ಹೊಂದಿರುವ ಯೋಧರ ಮಕ್ಕಳಿಗೆ | |
|---|---|
| **ಪದವಿ** | **ವೇತನದ ಮೊತ್ತ ರೂ.** |
| ಎನ್‌ಸಿಒ ಮತ್ತು ಇತರೆ | 32,000-00 |
| ಜೆಸಿಒ | 16,000-00 |
| ಅಧಿಕಾರಿಗಳು | -- |

**ಪ್ರವೇಶ ಪರೀಕ್ಷೆ ವಿಧಾನ:** 7 ಜನವರಿ 2018 ರಿಂದ ಅಖಿಲಾ ಭಾರತ ಸೈನಿಕ ಶಾಲಾ ಪ್ರವೇಶ ಪರೀಕ್ಷೆಯು ಒ ಮ್ ಆರ್ ಆಧಾರಿತ ಪರೀಕ್ಷೆಯಾಗಿರುತ್ತದೆ. ಪರಿಷ್ಕೃತ ಪ್ರವೇಶ ಪರೀಕ್ಷೆಯ ವಿಧಾನ ಈ ಕೆಳಗಿನಂತಿರುತ್ತದೆ.

| VI ನೇ ತರಗತಿ | | | | | IX ನೇ ತರಗತಿ | | | | |
|---|---|---|---|---|---|---|---|---|---|
| **ಕ್ರ.ಸ** | **ವಿಷಯ** | **ಒಟ್ಟು ಪ್ರಶ್ನೆ & ಅಂಕಗಳು** | **ಒಟ್ಟು ಅಂಕಗಳು** | **ಕಾಲಾವಧಿ (ನಿಮಿಷಗಳು)** | **ಕ್ರ.ಸ** | **ವಿಷಯ** | **ಒಟ್ಟು ಪ್ರಶ್ನೆ & ಅಂಕಗಳು** | **ಒಟ್ಟು ಅಂಕಗಳು** | **ಕಾಲಾವಧಿ (ನಿಮಿಷಗಳು)** |
| (ಅ) | ಗಣಿತ | 50 x 3 | 150 | 60 | (ಅ) | ಗಣಿತ | 50 x 4 | 200 | 60 |
| (ಆ) | ಸಾಮಾನ್ಯ ಜ್ಞಾನ (ವಿಜ್ಞಾನ & ಸಮಾಜ ಶಾಸ್ತ್ರ) | 25 x 2 | 50 | 30 | (ಆ) | ಇಂಗ್ಲೀಷ್ | 25 x 2 | 50 | 30 |
| (ಇ) | ಭಾಷಾ ಜ್ಞಾನ | 25 x 2 | 50 | 30 | (ಇ) | ಬುದ್ಧಿಮಾಪನ ಪರೀಕ್ಷೆ | 25 x 2 | 50 | 30 |
| (ಈ) | ಬುದ್ಧಿಮಾಪನ ಪರೀಕ್ಷೆ | 25 x 2 | 50 | 30 | (ಈ) | ಸಾಮಾನ್ಯ ವಿಜ್ಞಾನ | 25 x 2 | 50 | 30 |
| | ಒಟ್ಟು | | 300 | 150 | (ಉ) | ಸಮಾಜ ಶಾಸ್ತ್ರ | 25 x 2 | 50 | 30 |
| ***ಸೂಚನೆ:** ಒಂದೇ ಒ ಮ್ ಆರ್ ಪತ್ರಿಕೆಯನ್ನು ಒದಗಿಸಲಾದರೂ ಸಹ ಬುದ್ಧಿಮಾಪನ ಪ್ರಶ್ನೆ ಪತ್ರಿಕೆಯನ್ನು 2 ಗಂಟೆಗಳ ನಂತರ ಅಭ್ಯರ್ಥಿಗೆ ನೀಡಲಾಗುವುದು.* | | | | | | ಒಟ್ಟು | | 400 | 180 |

**ಅರ್ಜಿ ಸಲ್ಲಿಸುವ ವಿಧಾನ: ಆಯ್ಕೆ1:** ಶಾಲೆಯ ವೈಬ್‌ಸೈಟ್‌ನ್‌ಲ್ಲಿ ಲಭ್ಯವಿರುವ ಆನ್‌ಲೈನ್ ಅರ್ಜಿಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿದ ನಂತರ ಪಿಡಿಎಫ್‌ನಲ್ಲಿಪ್ರಿಂಟ್ ತೆಗೆದು ಅಗತ್ಯ ದಾಖಲೆ ಹಾಗೂ ಅರ್ಜಿಶುಲ್ಕದ ಡಿಡಿಯೊಂದಿಗೆ ಸಲ್ಲಿಸುವುದು. ಮಾಹಿತಿ ಪುಸ್ತಕ ಹಾಗೂ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಡೌನ್‌ಲೊಡ್ ಮಾಡಲು ಶಾಲೆಯ ವೈಬ್‌ಸೈಟ್ www.sainikschoolkodagu.edu.in ಅನ್ನು 16 ಅಕ್ಟೋಬರ್ ರಿಂದ 30 ನವೆಂಬರ್ 17ರವರೆಗೆ ಸಂಪರ್ಕಿಸಿ.

**ಆಯ್ಕೆ2:** ಮಾಹಿತಿ ಪುಸ್ತಕ/ ಅರ್ಜಿಯನ್ನು ಶಾಲಾ ಕೆಲಸದ ವೇಳೆಯಲ್ಲಿ ಅಂದರೆ *1000* ರಿಂದ *1300* ಗಂಟೆಯೊಳಗೆ ಎಲ್ಲಾ ಕೆಲಸದ ದಿನಗಳಲ್ಲಿಖುದ್ದಾಗಿ ಅರ್ಜಿ ಶುಲ್ಕದ ಡಿಡಿಯನ್ನು ಸಲ್ಲಿಸಿ ಪಡೆದುಕೊಳ್ಳಬಹುದು (16 ಅಕ್ಟೋಬರ್ 17 ರಿಂದ 30 ನವೆಂಬರ್ 17). ಮಾಹಿತಿ ಪುಸ್ತಕ/ ಅರ್ಜಿಯನ್ನು ಖುದ್ದಾಗಿ ಪಡೆಯುವವರು ಅಧಿಕೃತ ದಾಖಲೆಯೊಂದಿಗೆ ಅಂದರೆ ಆಧಾರ್ ಕಾರ್ಡ್/ಮತದಾನ ಗುರುತಿನ ಚೀಟಿ/ಪಾನ್ ಕಾರ್ಡ್/ ವಾಹನ ಚಾಲನ ಪರವಾನಗಿಯನ್ನು ತೋರಿಸತಕ್ಕದ್ದು.

**ಅರ್ಜಿಶುಲ್ಕ.** ಸಾಮಾನ್ಯ ವರ್ಗ ಮತ್ತು ರಕ್ಷಣಾ ಇಲಾಖೆಯವರಿಗೆ ರೂ. 500/- ಮತ್ತು ಪ.ಜಾತಿ/ಪಂಗಡ ರೂ.350/-ಇದನ್ನು ಪ್ರಾಂಶುಪಾಲರು, ಸೈನಿಕ ಶಾಲೆ ಕೊಡಗು, ಕುಶಾಲನಗರದಲ್ಲಿ ಸಂದಾಯವಾಗುವಂತೆ ಡಿಮ್ಯಾಂಡ್ ಡ್ರಾಫ್ಟ್‌ನ್ನು ತೆಗೆದು ಕಳುಹಿಸತಕ್ಕದ್ದು. ಪ್ರತೀ ಅರ್ಜಿಗೂ ಪ್ರತ್ಯೇಕ ಡಿಡಿಯನ್ನು ಪಡೆದು ಲಗತ್ತಿಸತಕ್ಕದ್ದು.

**ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನಾಂಕ 05 ಡಿಸೆಂಬರ್ 2017 ( ಶನಿವಾರ )**

***ಸೂಚನೆ:*– 1.** *ಪ್ರಶ್ನೆ ಪತ್ರಿಕೆಯ ನಮೂನೆ, ದಾಖಲಾತಿಯ ನಿಯಮಗಳನ್ನು ಹಾಗೂ ಪ್ರಶ್ನೆ ಪತ್ರಿಕೆಯ ವಿಷಯವನ್ನು ಸೈನಿಕ ಶಾಲಾ ಸೊಸೈಟಿಯು ಬದಲಾವಣೆ ಮಾಡುವ ಹಕ್ಕನ್ನು ಹೊಂದಿರುತ್ತದೆ.*

**2.** *ಶಾಲೆಯು ಪರೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತರಬೇತಿಯನ್ನು ನೀಡುವುದಿಲ್ಲ/ಮಧ್ಯವರ್ತಿಗಳನ್ನು ಹೊಂದಿರುವುದಿಲ್ಲ, ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಗಳಿಸಿದ ಅಂಕಗಳು, ಮೌಖಿಕ ಸಂದರ್ಶನ ಮತ್ತು ವೈದ್ಯಕೀಯ ತಪಾಸಣೆಯ ಮೇರೆಗೆ ಆಯ್ಕೆಯನ್ನು ಮಾಡಲಾಗುತ್ತದೆ.*

**3.** *ಒಂದಕ್ಕಿಂತ ಹೆಚ್ಚು ಡಿಡಿ ಅಥವಾ ಅರ್ಜಿಗಳನ್ನು ಸ್ವೀಕರಿಸುವುದು/ ಸಲ್ಲಿಸುವುದನ್ನು ನಿಷೇಧಿಸಲಾಗಿದೆ.*

**4.** ***ಅರ್ಜಿಯೊಂದಿಗೆ ಅಭ್ಯರ್ಥಿಯ ಆಧಾರ್ ಕಾರ್ಡ್ ಮತ್ತು ಜನನ ಪ್ರಮಾಣ ಪತ್ರದ ಪ್ರತಿಯನ್ನು ಲಗ್ಗತ್ತಿಸತ್ತಕ್ಕದ್ದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ಶಾಲೆಯ ವೈಬ್‌ಸೈಟ್*** www.sainikschoolkodagu.edu.in **ಅಥವಾ ದೂರವಾಣಿ 08276-278963.**